**Jewellers' Association**

**Regd No. Mis. C. 185 of 41-42**

NAGARTHPET : BANGALORE

---

ಜ್ಯೂಯಲರ್ಸ್ ಅಸೋಸಿಯೇಷನ್

Regd. No. Mis. C. 185 of 41-42

ನಗರ್ತಪೇಟೆ, ಬೆಂಗಳೂರು ಸಿಟಿ

# ೯ನೇ ಜನರಲ್ ಮೀಟಿಂಗ್

---

ತಾ|| **1-1-71** ರಿಂದ **31-12-72** ರ ವರೆಗಿನ

**ಕಾರ್ಯ ನಿರ್ವಾಹಕ ಮಂಡಲಿಯವರ**

## ರಿಪೋರ್ಟು ವಿವರ

ಜ್ಯೂಯಲರ್ಸ್ ಅಸೋಸಿಯೇಷನ್

# ಜ್ಯೂಯಲರ್ಸ್ ಅಸೋಸಿಯೇಷನ್

Regd No. Mis. C. 185 of 41-42

ನಗರ್ತಪೇಟೆ, ಬೆಂಗಳೂರು ಸಿಟಿ

## 9 ನೇ ಜನರಲ್ ಮೀಟಿಂಗ್

**ತಾ|| 23—12—1973**

## ಮೆಂಬರನ್ನು ಗುರ್ತಿಸುವ ಚೀಟಿ

ಮೆಂಬರಿನ ನಂ..........

ಹೆಸರು..................................................................

3) ಮ್ಯಾನೇಜಿಂಗ್ ಕಮಿಟಿಯವರ ರಿಪೋರ್ಟನ್ನು ತಪ್ಪದೇ ತೆಗೆದು ಕೊಂಡು ಬರಬೇಕಾಗಿ ಪ್ರಾರ್ಥನೆ.

4) ಜನರಲ್ ಮೀಟಿಂಗಿನಲ್ಲಿ ಚರ್ಚಿಸಬಹುದಾದ ವಿಷಯಗಳು ಏನಾದರೂ ಇದ್ದರೆ ತಾ|| 20-12-73 ಗುರುವಾರ ರಾತ್ರಿ 8 ಘಂಟೆ ಒಳಗೆ ಸೆಕ್ರೆಟರಿಯವರಿಗೆ ಲಿಖಿತ ಮೂಲಕ ತಿಳಿಸಬೇಕು.

# ಜ್ಯೂಯಲರ್ಸ್ ಅಸೋಸಿಯೇಷನ್

Regd. No. Mis. C. 185 of 41-42

ನಗರ್ತಪೇಟೆ, ಬೆಂಗಳೂರು ಸಿಟಿ

## ನೋಟೀಸ್

**ಈ ಅಸೋಸಿಯೇಷನ್ನಿನ 9ನೇ ಜನರಲ್ ಮೀಟಿಂಗ್**

1) ತಾ॥ 23—12—73 ಭಾನುವಾರ ಬೆಳಿಗ್ಗೆ 10-30 ಘಂಟೆಗೆ ನಂದಿ ಬೆಟ್ಟದ ಮೇಲಿರುವ ಕಬ್ಬನ್ ಬಂಗಲೆಯಲ್ಲಿ ಅಸೋಸಿಯೇಷನ್ನಿನ ಪ್ರೆಸಿಡೆಂಟರಾದ ಶ್ರೀ ಸಿ. ಆರ್. ಲಕ್ಷ್ಮೀನಾರಾಯಣಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯುತ್ತೆ.

2) ಮೆಂಬರುಗಳೆಲ್ಲರೂ ರಿಪೋರ್ಟಿನೊಂದಿಗೆ ಕಳುಹಿಸಿರುವ ಮೆಂಬರುಗಳನ್ನು ಗುರ್ತಿಸುವ ಚೀಟಿಗಳೊಡನೆ ಮೀಟಿಂಗಿಗೆ ದಯಮಾಡಿಸಬೇಕಾಗಿ ಪ್ರಾರ್ಥನೆ.

3) ಮ್ಯಾನೇಜಿಂಗ್ ಕಮಿಟಿಯವರ ರಿಪೋರ್ಟನ್ನು ಸರ್ವರೂ ಓದಿಕೊಂಡು ಬರಬೇಕಾಗಿ ಪ್ರಾರ್ಥನೆ.

4) ಜನರಲ್ ಮೀಟಿಂಗಿನಲ್ಲಿ ಚರ್ಚಿಸಬಹುದಾದ ವಿಷಯಗಳು ಏನಾದರೂ ಇದ್ದರೆ ತಾ॥ 20-12-73 ಗುರುವಾರ ರಾತ್ರಿ 8 ಘಂಟೆ ಒಳಗೆ ಸೆಕ್ರೆಟರಿಯವರಿಗೆ ಲಿಖಿತ ಮೂಲಕ ತಿಳಿಸಬೇಕು.

5) ಮ್ಯಾನೇಜಿಂಗ್ ಕಮಿಟಿ ಮೆಂಬರುಗಳ ಸ್ಥಾನಕ್ಕೆ ಚುನಾವಣೆಗೆ ನಿಲ್ಲಲು ಇಷ್ಟಪಡುವವರು ತಾ॥ 20-12-73 ರಾತ್ರಿ 8 ಘಂಟೆಯ ಒಳಗಾಗಿ ಸೆಕ್ರೆಟರಿಯವರಿಗೆ ಲಿಖಿತ ಮೂಲಕ ತಿಳಿಸಬೇಕು. ನಿವೃತ್ತರಾದವರೂ ಸಹಾ ಚುನಾವಣೆಗೆ ನಿಲ್ಲಬಹುದು.

6) ಮೂರು ತಿಂಗಳು ಮತ್ತು ಅದಕ್ಕೆ ಹೆಚ್ಚಾಗಿ ಚಂದಾ ಬಾಕಿ ಇರುವ ಮೆಂಬರುಗಳು ಮ್ಯಾನೇಜಿಂಗ್ ಕಮಿಟಿ ಮೆಂಬರು ಸ್ಥಾನದ ಚುನಾವಣೆಗೆ ನಿಲ್ಲಲೂ, ಮತ್ತು ಓಟು ಮಾಡಲೂ ಅವಕಾಶವಿರುವುದಿಲ್ಲ.

7) ಅಥಿತಿಗಳಾಗಿ ಬರುವವರು 3 ದಿನ ಮುಂಚಿತವಾಗಿ 12 ರೂ. ಗಳನ್ನು ಕಳುಹಿಸಿಕೊಡತಕ್ಕದ್ದು.

---

N. B. :— ಮೆಂಬರುತನದ ಚಂದಾ ಮೂರು ತಿಂಗಳು ಮತ್ತು ಅದಕ್ಕೆ ಹೆಚ್ಚಾಗಿ ಚಂದಾ ಬಾಕಿ ಇರುವವರು ಡೈರೆಕ್ಟರು ಸ್ಥಾನಕ್ಕೆ ಚುನಾವಣೆಗೆ ನಿಲ್ಲಲು ಮತ್ತು ಓಟು ಮಾಡಲು ಅವಕಾಶ ವಿರುವುದಿಲ್ಲ,

# ಜ್ಯೂಯಲರ್ಸ್ ಅಸೋಸಿಯೇಷನ್

(ರಿಜಿಸ್ಟರ್ಡ್)

ನಗರ್ತಪೇಟೆ ಬೆಂಗಳೂರು ಸಿಟಿ

## ಕಾ ರ್ಯ ಕ್ರ ಮ

1) ಪ್ರಾರ್ಥನೆ
2) ಅಧ್ಯಕ್ಷರ ಭಾಷಣ
3) ಮ್ಯಾನೇಜಿಂಗ್ ಕಮಿಟಿಯವರು ತಯಾರುಮಾಡಿ ಒಪ್ಪಿಸುವ 9ನೇ ಜನರಲ್ ಮೀಟಿಂಗಿನ ರಿಪೋರ್ಟನ್ನು ಅಂಗೀಕರಿಸುವಿಕೆ.
4) ಸರ್ಟಿಫೈಡ್ ಆಡಿಟರವರಿಂದ ತಯಾರುಮಾಡಲ್ಪಟ್ಟ ತಾರೀಖು 1—1—1971 ರಿಂದ 31—12—1971 ತಾ॥ 1—1—1972 ರಿಂದ ತಾ॥ 31—12—1972 ರ ವರಿವಿಗೆ ಜಮಾಖರ್ಚು ಕಃಖ್ತೆಯನ್ನೂ ರಿಪೋರ್ಟನ್ನೂ ಅಂಗೀಕರಿಸುವಿಕೆ.
5) ಬೈಲಾ ಬದಲಾವಣೆ ಮಾಡುವ ವಿಷಯ
6) ಮುಂದಿನ ಸಾಲಿನ ಮ್ಯಾನೇಜಿಂಗ್ ಕಮಿಟಿಗೆ ಮೆಂಬರುಗಳನ್ನು ಚುನಾಯಿಸುವಿಕೆ.
7) ಲೋಕಲ್ ಆಡಿಟರುಗಳನ್ನು ಚುನಾಯಿಸುವಿಕೆ.
8) ಮುಂದಿನ ಸಾಲಿನ ಬಡ್ಜೆಟ್ ಮಂಜೂರು ಮಾಡುವಿಕೆ.

| | | |
|---|---|---|
| a) ಶಿಬ್ಬಂದಿ | 7,200 | 00 |
| b) ಬಾಡಿಗೆ | 5,000 | 00 |
| c) ಪ್ರಿಂಟಿಂಗ್ | 1,000 | 00 |
| d) ಆಡಿಟ್ ಫೀ | 150 | 00 |

| | | | |
|---|---|---|---|
| e) | ದೀಪ ನೀರು | 800 | 00 |
| f) | ಸಾದಿಲ್ವಾರ್ | 1,000 | 00 |
| g) | ಟೆಲಿಫೋನ್ | 100 | 00 |
| h) | ರೀಡಿಂಗ್ ರೂಂ | 300 | 00 |
| i) | ಎಲೆಕ್ಟ್ರಿಕ್ ಲೈಟ್ | 700 | 00 |
| j) | ಸ್ಟೇಷನರಿ | 150 | 00 |
| k) | ಆಲ್ ಇಂಡಿಯ ಸರಾಫ್ ಅಸೋಸಿಯೇಷನ್ | 500 | 00 |
| l) | ಲೀಗಲ್ ಚಾರ್ಜಸ್ | 300 | 00 |
| m) | ವಿಶೇಷ ಸಂದರ್ಭಗಳು | 1,000 | 00 |

9) ಅಸೋಸಿಯೇಷನ್ ಮೆಂಬರುಗಳನ್ನು ರಾಜಪೋಷಕರು, ಪೋಷಕರು ಮತ್ತು ಜೀವಿತ ಕಾಲದ ಸದಸ್ಯರುಗಳಾಗಬೇಕೆಂದು ಪ್ರೋತ್ಸಾಹಿಸುವ ವಿಚಾರ.

ರಾಜಪೋಷಕರು 1,000 ರೂ. ಗಳಿಗೆ ಕಮ್ಮಿಯಿಲ್ಲದೆ ಕೊಡುವವರು.
ಪೋಷಕರು 500 ರೂ. ,,
ಜೀವಿತಕಾಲದ ಸದಸ್ಯರು 100 ರೂ. ,,

10) ತಾ॥ ೫—11—1973ರ ಒಳಗೆ ಅಸೋಸಿಯೇಷನ್ನಿಗೆ ಬಂದ ಅರ್ಜಿಗಳ ವಿಚಾರ.

11) ಬ್ಯಾಲೆಟ್ ಮೂಲಕ ಚುನಾಯಿತರಾದ ಮ್ಯಾನೇಜಿಂಗ್ ಕಮಿಟಿ ಮೆಂಬರುಗಳ ಹೆಸರುಗಳನ್ನು ಪ್ರಚುರಪಡಿಸುವಿಕೆ.

12) ಮಾನ್ಯ ಅತಿಥಿಗಳ ಭಾಷಣ

13) ಅಧ್ಯಕ್ಷರ ಮುಕ್ತಾಯ ಭಾಷಣ

14) ವಂದನೆಗಳು

15) ರಾಷ್ಟ್ರಗೀತೆ.



## ಮ್ಯಾನೇಜಿಂಗ್ ಕಮಿಟಿ ಮೆಂಬರುಗಳು

ಶ್ರೀಯುತರಾದ—

| | | |
|---|---|---|
| 1. | C. R. ಲಕ್ಷ್ಮೀನಾರಾಯಣಶೆಟ್ಟರು | ಪ್ರೆಸಿಡೆಂಟರು |
| 2. | K. R. V. ರತ್ನಂರವರು | ವೈ. ಪ್ರೆಸಿಡೆಂಟರು |
| 3. | R. ಸೇತುರಾಜನ್‌ರವರು | ಸೆಕ್ರೆಟರಿ |
| 4. | M. N. ವರದರಾಜ್, B.Sc., | ಜಾ॥ ಸೆಕ್ರೆಟರಿ |
| 5. | E. V. ಸುಬ್ಬಯ್ಯನವರು | ಟ್ರೆಜರರ್ |
| 6. | S. N. ರಾಜಗೋಪಾಲರಾಜುರವರು | ಮ್ಯಾ. ಕ. ಮೆಂ. |
| 7. | B. N. ಕೃಷ್ಣಯ್ಯಶೆಟ್ಟರು | " |
| 8. | C. R. ರಾಧಾಕೃಷ್ಣಯ್ಯಶೆಟ್ಟರು | " |
| 9. | P. R. ರಾಮಚಂದ್ರಗುಪ್ತರು | " |
| 10. | S. ವೆಂಕಟರಾಮಯ್ಯಶೆಟ್ಟರು | " |
| 11. | B. V. ಸುಬ್ಬರಾಯಶೆಟ್ಟರು | " |
| 12. | P. R. ಸಂಪಂಗಿರಾಮಶೆಟ್ಟರು | " |
| 13. | K. S. ರಾಮಯ್ಯಗುಪ್ತರು | " |
| 14. | V. R. ಪಾಂಡುರಂಗಂರವರು | " |
| 15. | K. R. ಪ್ರಸನ್ನಕುಮಾರ್‌ರವರು | " |

ಅಯ್ಯಾ,

ಈ ದಿನ ಕಾರ್ಯಕಲಾಪಗಳನ್ನು ಪ್ರಾರಂಭಿಸುವ ಮೊದಲು ನಮ್ಮ ಮೆಂಬರುಗಳಾಗಿದ್ದು ಪವತಿಯಾದ

1. ದೇವತ ಶ್ರೀರಾಮಯ್ಯಶೆಟ್ಟರು
2. K. R. ನಂಜುಂಡಯ್ಯನವರು

3. C. J. ರಾಮಸ್ವಾಮಿಶೆಟ್ಟರು

4. ದೇವತ ಕೃಷ್ಣಯ್ಯಶೆಟ್ಟರು

ಇವರುಗಳ ಮತ್ತು ಪವತಿಯಾದ ರಾಷ್ಟ್ರನಾಯಕರುಗಳ ಆತ್ಮಕ್ಕೆ ಶಾಂತಿಯನ್ನೀಯಲೆಂದು ಭಗವಂತನನ್ನು ನಾವೆಲ್ಲರೂ ಮೌನದಿಂದ ಎರಡು ನಿಮಿಷ ಪ್ರಾರ್ಥಿಸೋಣ.

2. ಜ್ಯೂಯಲರ್ಸ್ ಅಸೋಸಿಯೇಷನ್ನಿನ ಮೆಂಬರುಗಳಾದ ತಮ್ಮೆಲ್ಲರಿಗೂ ಈ ಜನರಲ್ ಮೀಟಿಂಗಿಗೆ ಸುಸ್ವಾಗತವನ್ನು ಬಯಸಿ ತಾ|| 1-1-71 ರಿಂದ ತಾರೀಖು 31-12-1972 ರವರಿಗೆ ಅಸೋಸಿಯೇಷನ್ನಿನ ಪರವಾಗಿ ಮ್ಯಾನೇಜಿಂಗ್ ಕಮಿಟಿಯವರು ನಡೆಸಿದ ವಹಿವಾಟಿನ ವಿವರಣೆಯನ್ನು ತಮಗೆ ಒಪ್ಪಿಸಿ ಸಮ್ಮತಿಯನ್ನು ಪಡೆಯಲು ಕುತೂಹಲರಾಗಿದ್ದಾರೆ.

3. ತಾರೀಖು 1-1-1971ರಲ್ಲಿ ನಮ್ಮ ಅಸೋಸಿಯೇಷನ್ನಿನಲ್ಲಿ 170 ಜನ ಮೆಂಬರುಗಳಿದ್ದರು. ಕಾರಣಾಂತರಗಳಿಂದ ವಜಾ ಆಗಿ ಹೊಸದಾಗಿ ಸೇರಿರುವವರೂ ಸೇರಿ ತಾರೀಖು 31-12-1972 ರಲ್ಲಿ 164 ಮೆಂಬರುಗಳಿರುತ್ತಾರೆ.

4. ಸೇಲ್ಸ್‌ಟ್ಯಾಕ್ಸ್ ದರವು ಜಾಸ್ತಿಯಾದ್ದರಿಂದ ಕಮ್ಮಿಮಾಡಬೇಕೆಂದು ಸೇಲ್ಸ್ ಟ್ಯಾಕ್ಸ್ ಕಮಿಷನರ್‌ರವರಲ್ಲಿಯೂ ಮತ್ತು ಮೈಸೂರು ಸರ್ಕಾರದ ಮಾನ್ಯ ಹಣಕಾಸು ಸಚಿವರಲ್ಲಿಯೂ ಮನವಿ ಪತ್ರವನ್ನು ಸಲ್ಲಿಸಿದೆವು. ಅದರಂತೆ ಘನ ಸರ್ಕಾರದವರು ಸೇಲ್ಸ್ ಟ್ಯಾಕ್ಸ್ ದರವನ್ನು ಕೂಡಿದಷ್ಟುಗೂ ಕಮ್ಮಿ ಮಾಡಿರುತ್ತಾರೆ. ಅದರ ದರ ಈ ಕೆಳಕಂಡಂತೆ ಇರುತ್ತೆ. ಮೈಸೂರು ಸರ್ಕಾರದವರು ತಾರೀಖು 1-4-1973 ರಿಂದ ಎಲ್ಲಾ ವರ್ತಕರೂ ಮಾರುವ ಸರಕುಗಳಿಗೆ ಕೋಡ್ ನಂಬರುಗಳನ್ನು ಕೊಟ್ಟು ನಾವುಗಳು ಮಾಹೆಯಾನ ಕೊಡುವ ವಹಿವಾಟಿಗೆ ಕೋಡ್ ನಂಬರುಗಳನ್ನು ನಮೂದಿಸಿ ಪ್ರತಿಯೊಬ್ಬರೂ ಮೂರು ಪ್ರತಿಗಳನ್ನು ಕೊಡಬೇಕೆಂದು ಸುತ್ತೋಲೆಯನ್ನು ಜಾರಿಗೆ ತಂದಿರುತ್ತಾರೆ. *Vide* Circular No. CPR/1/73-74 D 20-6-73.



ತಾರೀಖು 18-6-73 ರಲ್ಲಿ ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿಯಲ್ಲಿ ಎಲ್ಲಾ ವರ್ತಕರ ಮೀಟಿಂಗಿನಲ್ಲಿ ಕಮರ್ಷಿಯಲ್ ಟ್ಯಾಕ್ಸ್ ಕಮಿಷನರ್‌ರವರು ಈ ವಿಷಯವಾಗಿ ವರ್ತಕರಿಗೆ ತೊಂದರೆಯಾಗದಂತೆ ಭರವಸೆ ಕೊಟ್ಟರು. ಅಸೋಸಿಯೇಷನ್ನಿನಿಂದ ಕಮರ್ಷಿಯಲ್ ಟ್ಯಾಕ್ಸ್ ಕಮಿಷನರ್ ಸಾಹೇಬರವರಿಗೆ ಕೋಡ್ ನಂಬರುಗಳನ್ನು ನಮೂದಿಸುವ ವಿಷಯವನ್ನು ಕೈಬಿಡಬೇಕೆಂದು ಮನವಿಯನ್ನು ಕೊಟ್ಟಿರುತ್ತೇವೆ.

**ತೆರಿಗೆ ವಿವರಗಳು**

| | | |
|---|---|---|
| Bullion | 2076001 | 1% |
| Diamond | 2064002 | 6% |
| Ruby | 2064004 | 6% |
| Other Precious Stones | 2064006 | 6% |
| Agate | 2064001 | 6% |
| Emarald | 2064003 | 6% |
| Sapphire | 2064005 | 6% |
| Articles Set with Precious Stones | 2064007 | 4% |
| Mangalasustra or any sacred symbolic ornaments worn by the bride at the time of marriage when sold at the price not exceeding Rs. 50 | 5003001 | nil |
| Chemical Diamonds | 9021022 | 3½% |
| Jewellery | 9021036 | 3½% |
| Silver Articles | 9021058 | 3½% |
| Unclassified goods | 9021137 | 3½% |

ವರ್ಷಂಪ್ರತಿವರ್ಷ ಚಿನ್ನ ಬೆಳ್ಳಿ ಧಾರಣೆ ಏರುತ್ತಾ ಇರುವ ವಿಷಯವು ಎಲ್ಲರಿಗೂ ತಿಳಿದಿದೆ. ನಾವುಗಳು ಘನ ಮೈಸೂರು ಸರ್ಕಾರದವರಿಗೆ ಚಿನ್ನ ಬೆಳ್ಳಿ ಧಾರಣೆ ಏರುತ್ತಾ ಇರುವುದರಿಂದ ಸೇಲ್ಸ್ ಟ್ಯಾಕ್ಸ್ ಧರವನ್ನು ಕಡಿಮೆ ಮಾಡಬೇಕೆಂದು ಕೆಲವು ಉದಾಹರಣೆಗಳೊಡನೆ ಮನವಿಯನ್ನು ಸಲ್ಲಿಸಿದ್ದೇವೆ. ಕರ್ನಾಟಕದಲ್ಲಿರುವ ಎಲ್ಲಾ ಸರಾಫು ವರ್ತಕರೂ ಸೇರಿ ಕೇಂದ್ರ ಮತ್ತು ಮಹಾರಾಷ್ಟ್ರಗಳಲ್ಲಿ ಸೇಲ್ಸ್‌ಟ್ಯಾಕ್ಸ್ ಧರವು ಕಮ್ಮಿ ಇದೆ ಎಂದು ಸರ್ಕಾರಕ್ಕೆ ತಿಳಿಸಿ ಸೇಲ್ಸ್‌ಟ್ಯಾಕ್ಸ್ ಧರವನ್ನು ಕಮ್ಮಿ ಮಾಡಿಸಲು ಪ್ರಯತ್ನಪಟ್ಟಿರುತ್ತೆ.

ನಮ್ಮ ಮೆಂಬರುಗಳಿಗೆ ಅನುಕೂಲವಾಗಲು ಚಿಟ್ ಫಂಡ್ ಮತ್ತು ಬ್ಯಾಂಕಿಂಗ್ ವ್ಯವಸ್ಥೆ ಏರ್ಪಾಟು ಮಾಡಲು ನಮ್ಮ ಅಭಿಪ್ರಾಯ. ಎಲ್ಲರೂ ಸಹಕರಿಸಬೇಕಾಗಿ ವಿನಂತಿ.

5. ಚಿಕ್ಕಪೇಟೆಯಲ್ಲಿರುವ ನಮ್ಮ ಅಸೋಸಿಯೇಷನ್ ಕಟ್ಟಡವನ್ನು ಶ್ರೀ|| ರಘುನಂದ ಪ್ರಸಾದ್ ಗಾರ್ಗೆಯವರು ವಾಯಿದೆಗೆ ಸರಿಯಾಗಿ ಅಂದರೆ ತಾ|| 31—10—1968ಕ್ಕೆ ನಮ್ಮ ಸುಬರ್ದು ಮಾಡದೆ ಇದ್ದದ್ದರಿಂದ ಅವರ ಮೇಲೆ ಸೆಕೆಂಡ್ ಅಡಿಷನಲ್ ಮುನ್‌ಸೀಫ್ ಕೋರ್ಟಿನಲ್ಲಿ ಕೇಸು ದಾಖಲೆ ಮಾಡಿರುತ್ತೆ. ಶ್ರೀ ಎಂ. ಎಲ್. ವೆಂಕಟನರಸಿಂಹಯ್ಯ ಅಡ್ವೊಕೇಟ್ ರವರು ಮೃತಿಯಾದ್ದರಿಂದ ಶ್ರೀ ಸಿ. ಆರ್. ವಿ. ಸ್ವಾಮಿ, ಅಡ್ವೊಕೇಟ್ ರವರನ್ನು ನೇಮಿಸಿರುತ್ತೆ. ಈಗ ಹಾಲಿ ಕೇಸು ವಿಚಾರಣಾ ಘಟ್ಟಕ್ಕೆ ಬಂದಿರುತ್ತೆ. ಕೇಸು ನಂ. HRC 479/69.

ಈ ಕೋರ್ಟಿನ ವ್ಯವಹಾರಗಳನ್ನು ಶ್ರೀಗಳಾದ ಕಾರುಪಾಕಲ ಆರ್. ಗೋವಿಂದಯ್ಯಶೆಟ್ಟರು, ಎಸ್. ಎನ್. ರಾಜಗೋಪಾಲರಾಜುರವರು, ಪಾತಪಾಳ್ಯಂ ರತ್ನಂ ಗುಪ್ತರವರು ಮತ್ತು ಪುಲ್ಲಯ್ಯಶೆಟ್ಟರು ನೋಡಿಕೊಳ್ಳುತ್ತಿದ್ದಾರೆ.

6. 1968 ಗೋಲ್ಡ್ ಕಂಟ್ರೋಲ್ ಆರ್ಡಿನೆನ್ಸ್ 4/68 ಮತ್ತು ಗೋಲ್ಡ್ ಕಂಟ್ರೋಲ್ ಆಕ್ಟ್ 45/68 ನಿಯಮಗಳನ್ನು ರದ್ದುಪಡಿಸಲು ಮೈಸೂರು ಹೈಕೋರ್ಟಿನಿಂದ ತಾ|| 4—10—1968 ರಲ್ಲಿ ಬಂದ ತಡೆಯಾಜ್ಞೆ ಸರ್ಕಾರದ ಪರವಾಗಿ ತೀರ್ಮಾನವಾಗಿರುತ್ತೆ,



ಗೋಲ್ಡ್ ಕಂಟ್ರೋಲ್ ರೀಜನಲ್ ಅಡ್ವೈಜರಿ ಕಮಿಟಿಗೆ ನಮ್ಮ ಅಸೋಸಿಯೇಷನ್ ಪರವಾಗಿ ನಮ್ಮ ಜಾಯಿಂಟ್ ಸೆಕ್ರೆಟರಿಯವರಾದ ಶ್ರೀ M. N. ವರದರಾಜ್, B.Sc. ಯವರನ್ನು ಪ್ರತಿನಿಧಿಯಾಗಿ ಚುನಾಯಿಸಿ ಕಳುಹಿಸಿರುತ್ತೆ. ಇವರನ್ನು ಸದರಿ ಅಡ್ವೈಜರಿ ಕಮಿಟಿಗೆ ಸೆಂಟ್ರಲ್ ಎಕ್ಸೈಜು ಕಲೆಕ್ಟರವರು ಪುನಃ ಕೋ-ಆಪ್ಟ್ ಮಾಡಿಕೊಂಡಿರುತ್ತಾರೆ. ಇವರು ತಾ|| 1—1—1971 ರಿಂದ ತಾ|| 31—12—1972 ರವರಿವಿಗೆ ರೀಜನಲ್ ಅಡ್ವೈಜರಿ ಕಮಿಟಿಯ 10 ಮೀಟಿಂಗುಗಳಿಗೆ ಹಾಜರಾಗಿರುತ್ತಾರೆ. ಸದರಿ ಮೀಟಿಂಗುಗಳಲ್ಲಿ ಚರ್ಚಿಸಿದ ಮೆಂಬರುಗಳಿಗೆ ಉಪಯೋಗವಾಗುವ ವಿಷಯಗಳನ್ನು ಸ್ಟೆನ್‌ಸಿಲ್ ಮಾಡಿಸಿ ಮೆಂಬರುಗಳ ತಿಳುವಳಿಕೆ ಬಗ್ಗೆ ಹಂಚಿರುತ್ತೆ.

7. ತಾ|| 1—1—1971 ರಿಂದ ತಾ|| 31—12—1972 ರ ವರಿವಿಗೆ ಮ್ಯಾನೇಜಿಂಗ್ ಕಮಿಟಿಯವರು 9 ಸಾಧಾರಣ ಮೀಟಿಂಗುಗಳನ್ನೂ 4 ಮೆಂಬರುಗಳ ಮೀಟಿಂಗುಗಳನ್ನೂ ನಡೆಯಿಸಿದರು. ಈ ಕೆಳಕಂಡಂತೆ ಹಾಜರಾತಿ ಇರುತ್ತೆ.

ಶ್ರೀಗಳಾದ—

| | | |
|---|---|---|
| 1) | C. R. ಲಕ್ಷ್ಮೀನಾರಾಯಣಶೆಟ್ಟರು | 9 |
| 2) | K. R. V. ರತ್ನಂರವರು | 4 |
| 3) | R. ಸೇತುರಾಜರವರು | 8 |
| 4) | M N. ವರದರಾಜ್, B.Sc., ರವರು | 9 |
| 5) | E. V. ಸುಬ್ಬಯ್ಯನವರು | 7 |
| 6) | S. N. ರಾಜಗೋಪಾಲರಾಜುರವರು | 7 |
| 7) | B. N ಕೃಷ್ಣಯ್ಯಶೆಟ್ಟರು | 4 |
| 8) | C R. ರಾಧಾಕೃಷ್ಣಯ್ಯಶೆಟ್ಟರು | 6 |
| 9) | P. R. ರಾಮಚಂದ್ರಗುಪ್ತರು | 2 |
| 10) | S. ವೆಂಕಟರಾಮಯ್ಯಶೆಟ್ಟರು | 8 |
| 11) | B. V. ಸುಬ್ಬರಾಯಶೆಟ್ಟರು | 6 |

| | | |
|---|---|---|
| 12) | P. R. ಸಂಪಂಗಿರಾಮಶೆಟ್ಟರು | 6 |
| 10) | K. S. ರಾಮಯ್ಯಗುಪ್ತರು | 7 |
| 14) | V. R. ಪಾಂಡುರಂಗಂರವರು | 6 |
| 15) | K. R. ಪ್ರಸನ್ನಕುಮಾರ್‌ರವರು | 4 |

8. ಈಗ ಹಾಲಿ ಇರುವ ಮ್ಯಾನೇಜಿಂಗ್ ಕಮಿಟಿ ಮೆಂಬರುಗಳ ಪೈಕಿ ಈ ಕೆಳಗೆ ಕಂಡ ಮ್ಯಾನೇಜಿಂಗ್ ಕಮಿಟಿ ಮೆಂಬರುಗಳು ಲಾಟರಿ ಮೂಲಕ ನಿವೃತ್ತಿ ಹೊಂದಿರುತ್ತಾರೆ.

ಶ್ರೀಗಳಾದ

1) S. ವೆಂಕಟರಾಮಯ್ಯಶೆಟ್ಟರು
2) C. R. ರಾಧಾಕೃಷ್ಣಯ್ಯಶೆಟ್ಟರು
3) P. R. ರಾಮಚಂದ್ರಗುಪ್ತರು
4) S. N. ರಾಜಗೋಪಾಲರಾಜುರವರು
5) B. V. ಸುಬ್ಬರಾಯಶೆಟ್ಟರು

9. ನಮ್ಮ ಅಸೋಸಿಯೇಷನ್ನಿನಲ್ಲಿ ನವರತ್ನಗಳನ್ನು ತೂಕ ಮಾಡುವ ವ್ಯವಸ್ಥೆ ಬಹಳ ಕಾಲದಿಂದ ಇರಲಿಲ್ಲ. ನವರತ್ನಗಳ ತೂಕವನ್ನು ಪ್ರಾರಂಭಿಸಲು ಶ್ರೀ|| ಗಂಜಾಂ ನಾಗಪ್ಪ ಅಂಡ್ ಸನ್ಸ್‌ರವರು ಉಚಿತವಾಗಿ ನಮ್ಮ ಅಸೋಸಿಯೇಷನ್ನಿಗೆ ರತ್ನಗಳನ್ನು ತೂಕಮಾಡುವ ತ್ರಾಸನ್ನು ಕೊಟ್ಟಿರುತ್ತಾರೆ. ತಾ|| 16—3—72 ರಿಂದ ನವರತ್ನಗಳನ್ನು ತೂಕ ಮಾಡುವ ವ್ಯವಸ್ಥೆಯನ್ನು ನಮ್ಮ ಅಸೋಸಿಯೇಷನ್ನಿನಲ್ಲಿ ಪ್ರಾರಂಭಿಸಿರುತ್ತೆ. ಈ ಪ್ರಾರಂಭಕಾರ್ಯಕ್ಕೆ ಪ್ರೋತ್ಸಾಹಿಸಿದ ಎಲ್ಲಾ ವಜ್ರದ ವ್ಯಾಪಾರಸ್ಥರಿಗೂ ನಮ್ಮ ವಂದನೆಗಳು.

10. ತಾ|| 16—1—1972 ರಲ್ಲಿ ನಮ್ಮ ಅಸೋಸಿಯೇಷನ್ ಕಾರ್ಯಾಲಯದಲ್ಲಿ ಬೆಂಗಳೂರು ಸಿಟಿ ಬೆಳ್ಳಿ ಚೈನು ಕೆಲಸಗಾರರ ಸಮಿತಿಯವರಿಂದ ನಿಗದಿಮಾಡಿರುವ ಮಜೂರಿಗಳನ್ನು ಪರಿಶೀಲಿಸಲು ಒಂದು ಮೆಂಬರುಗಳ ಮಿಟಿಂಗನ್ನು ಕರೆಸಲಾಗಿತ್ತು. ಸದರಿ ಮಿಟಿಂಗಿಗೆ ಬೆಳ್ಳಿ



ಚೈನು ಕೆಲಸಗಾರರ ಸಮಿತಿಯವರ ಪ್ರತಿನಿಧಿಗಳನ್ನೂ ಸಹ ಕರೆಸಿ ಖುದ್ದಾಗಿ ಮಜೂರಿಗಳನ್ನು ನಮ್ಮ ಮೆಂಬರುಗಳೊಡನೆ ಚರ್ಚಿಸಿ ಸಾಧ್ಯವಾದಷ್ಟು ಕಮ್ಮಿ ಮಾಡಿಸಿರುತ್ತೆ. ಈ ಕಾರ್ಯಕ್ಕೆ ಸಹಾಯಮಾಡಿದ ನಮ್ಮ ಎಲ್ಲಾ ಮೆಂಬರುಗಳಿಗೂ ನಮ್ಮ ವಂದನೆಗಳು.

11. ತಾ|| 1—4—1972 ರಿಂದ ಜಾರಿಗೆ ಕೊಟ್ಟಿದ್ದ ಬೆಂಗಳೂರು ಸ್ಪಿನ್ನಿಂಗ್ ಕೆಲಸಗಾರರ ಸಂಘದವರು ಮಜೂರಿಗಳನ್ನು ಹೆಚ್ಚಿಸಿರುವುದನ್ನು ಪರಿಶೀಲಿಸಲು ತಾ|| 20—4—1972 ರಲ್ಲಿ ನಮ್ಮ ಅಸೋಸಿಯೇಷನ್ ಕಾರ್ಯಾಲಯದಲ್ಲಿ ಒಂದು ಮೆಂಬರುಗಳ ಮಿಟಿಂಗನ್ನು ಏರ್ಪಾಟುಮಾಡಿ ಸದರಿ ಮಿಟಿಂಗಿಗೆ ಮೇಲ್ಕಂಡ ಸಂಘದವರ ಪ್ರತಿನಿಧಿಗಳನ್ನು ಕರೆಸಿ ಮಜೂರಿಗಳನ್ನು ಚರ್ಚಿಸಿ ಆದಷ್ಟು ಮಜೂರಿಗಳನ್ನು ಕಡಿಮೆ ಮಾಡಿಸಿರುತ್ತೆ. ಈ ಕಾರ್ಯಕ್ಕೆ ಸಹಾಯಮಾಡಿದ ಎಲ್ಲಾ ಮೆಂಬರುಗಳಿಗೂ ನಮ್ಮ ವಂದನೆಗಳು.

12. ಮೈಸೂರು ಸಂಸ್ಥಾನದಲ್ಲಿ ಒಟ್ಟು ದೇಶವನ್ನು ಪ್ರತಿನಿಧಿಸುವ ಅಖಿಲ ಮೈಸೂರು ಸರಾಫ್ ವರ್ತಕರ ಸಂಘ ಇಲ್ಲದೆ ಇದ್ದದ್ದರಿಂದ ತಾರೀಖು 2-6-1972 ರಲ್ಲಿ ಬೆಂಗಳೂರಿನಲ್ಲಿರುವ ಮದ್ರಾಸ್ ಉಡ್‌ಲ್ಯಾಂಡ್ ಹೋಟೆಲಿನಲ್ಲಿ ಅಖಿಲ ಮೈಸೂರು ಸರಾಫ್ ವರ್ತಕರ ಸಮ್ಮೇಳನವನ್ನು ನಡೆಸಿದೆವು. ಆ ಸಮ್ಮೇಳನದಲ್ಲಿ ನಮ್ಮ ಅಸೋಸಿಯೇಷನ್ನೇ ಪ್ರಧಾನ ಕಛೇರಿಯಾಗಿರಬೇಕೆಂದು ತೀರ್ಮಾನಿಸಿರುತ್ತೆ. ಸಧ್ಯಕ್ಕೆ ಪ್ರೆಸಿಡೆಂಟರು, ಸೆಕ್ರೆಟರಿಗಳು ಮತ್ತು ಟ್ರೆಜರರ್‌ರವರುಗಳನ್ನು ಚುನಾಯಿಸಿರುತ್ತೆ.

ಈ ಕಮಿಟಿಯವರು ಅಖಿಲ ಮೈಸೂರು ಸರಾಫ್ ಸಂಘದ ಡ್ರಾಫ್ಟ್ ಬೈಲಾಗಳನ್ನು ಆದಷ್ಟು ಜಾಗ್ರತೆಯಾಗಿ ತಯಾರುಮಾಡಿ ಸಂಘವನ್ನು ರಿಜಿಸ್ಟರುಮಾಡಬೇಕೆಂದು ತೀರ್ಮಾನಿಸಿದರು.

13. ಅಸೋಸಿಯೇಷನ್ನಿನ ಬೈಲಾ ಪುಸ್ತಕಗಳು ಎಲ್ಲಾ ಮುಗಿದು ಹೋಗಿದ್ದುದರಿಂದ ನಮ್ಮ ಅಸೋಸಿಯೇಷನ್ನಿನ ಮೆಂಬರಾದ ಶ್ರೀ K. R. ಗೋವಿಂದಯ್ಯಶೆಟ್ಟಿಯವರಲ್ಲಿದ್ದ ಒಂದು ಕಾಪಿಯನ್ನು ತೆಗೆದುಕೊಂಡು ಹೊಸದಾಗಿ ಪ್ರಿಂಟುಮಾಡಿಸಿ ಬೈಲಾ ಬದಲಾವಣೆಗಳ ಬಗ್ಗೆ ಸೂಚನೆಗೆ ಇಂಟರ್

ಲೀಫ್ ಹಾಕಿ ಮೆಂಬರುಗಳಿಗೆಲ್ಲಾ ಹಂಚಿರುತ್ತೆ. ಈ ವರಿವಿಗೆ ಯಾರಿಂದಲೂ ಸೂಚನೆಗಳು ಬಂದಿಲ್ಲ. ದಯವಿಟ್ಟು ಮೆಂಬರುಗಳಿಗೆ ಹಂಚಿರುವ ಬೈಲಾ ಪುಸ್ತಕಗಳನ್ನು ಕಮಗೆ ತೋರುವ ಬೈಲಾ ಬದಲಾವಣೆಗಳನ್ನು ಜನರಲ್ ಮಿಾಟಿಂಗಿನಲ್ಲಿ ಸೂಚಿಸಿ ಬೈಲಾ ಬದಲಾವಣೆಗೆ ಸಹಾಯಮಾಡಬೇಕಾಗಿ ಕೋರಿದೆ.

14. ಮೆಂಬರುಗಳಿಂದ ಚಂದಾ ವಸೂಲಿ ಸರಿಯಾಗಿ ಆಗುತ್ತಿಲ್ಲವಾದ್ದರಿಂದ ಮೆಂಬರುಗಳೆಲ್ಲರೂ ಪ್ರತಿ ತಿಂಗಳೂ ತಮ್ಮ ಚಂದಾವನ್ನು ಕೊಟ್ಟರೆ ಬಹಳ ಅನುಕೂಲ. ಅಲ್ಲದೆ ಕನಿಷ್ಟಪಕ್ಷ 6 ತಿಂಗಳಿಗೊಮ್ಮೆಯಾದರೂ ಮುಂಗಡವಾಗಿ ಚಂದಾ ಕೊಟ್ಟಲ್ಲಿ ಅಸೋಸಿಯೇಷನ್ ಕಾರ್ಯಗಳನ್ನು ಸುಗಮವಾಗಿ ನಡೆಸಲು ಅನುಕೂಲವಾಗಿರುತ್ತೆ.

15. ಈ ಮ್ಯಾನೇಜಿಂಗ್ ಕಮಿಟಿಯವರು ಅಸೋಸಿಯೇಷನ್ನಿನ ಕೆಲಸಕಾರ್ಯಗಳು ಸುಗಮವಾಗಿ ನಡೆಸಲು ಸಹಾಯಮಾಡಿದ ಎಲ್ಲಾ ಮೆಂಬರುಗಳಿಗೂ, ಅಸೋಸಿಯೇಷನ್ನಿನ ಲೆಖ್ಖಗಳನ್ನು ಆಡಿಟ್‌ಮಾಡಿದ ಶ್ರೀ K. ಯುಗಂಧರಶ್ರೇಷ್ಠಿಯವರಿಗೂ, ಲೋಕಲ್ ಆಡಿಟರುಗಳಾದ ಶ್ರೀ ಕೊರಪಾಟಿ ಕೃಷ್ಣಮೂರ್ತಿಯವರು ಮತ್ತು ಶ್ರೀ ಪಾಮಡಿ ರಾಮ ಚಂದ್ರಶೆಟ್ಟಿಯವರುಗಳಿಗೂ, ಲೀಗಲ್ ಅಡ್ವೈಜರಾದ ಶ್ರೀ ಗುಂಡಯ್ಯ ಶೆಟ್ಟಿ, B.A., (Hons.) ರವರಿಗೂ, ನಮ್ಮನ್ನು ಪರಿಪಾಲಿಸುವ ಸರ್ಕಾರದವರಿಗೂ, ರಾಜ್ಯಪಾಲರಿಗೂ, ಧನ್ಯವಾದಗಳನ್ನು ಅರ್ಪಿಸುತ್ತೇವೆ.



## ಮ್ಯಾನೇಜಿಂಗ್ ಕಮಿಟಿಯವರು ಸೂಚಿಸಿರುವ ಬೈಲಾ ತಿದ್ದುಪಡಿ

| ಹಾಲಿ ಇರುವ ಬೈಲಾ | ತಿದ್ದುಪಡಿ |
|---|---|
| 1 ಸಂಘದ ಹೆಸರು : ಈ ಸಂಘವನ್ನು ಜ್ಯೂಯಲರ್ಸ್ ಅಸೋಸಿಯೇಷನ್ ಎಂಬುದಾಗಿ ಕರೆಯತಕ್ಕದ್ದು. | ಈ ಸಂಘವನ್ನು ಜ್ಯೂಯಲರ್ಸ್ ಅಂಡ್ ಡೈಮಂಡ್ ಮರ್ಚೆಂಟ್ಸ್ ಅಸೋಸಿಯೇಷನ್ ಎಂಬುದಾಗಿ ಕರೆಯತಕ್ಕದ್ದು. |
| 2 a) ಈ ಸಂಘವ ಮೆಂಬರುಗಳ ವ್ಯಾಪಾರಿಕ, ನೈತಿಕ, ಸಾಂಘಿಕ, ಶಾರೀರಿಕ ಮತ್ತು ಮತೀಯ ಏಳಿಗೆಗೆ ಸಹಕರಿಸುವುದು. | ಈ ಸಂಘದ ಮೆಂಬರುಗಳ ವ್ಯಾಪಾರಿಕ, ನೈತಿಕ, ಸಾಂಘಿಕ ಮತ್ತು ಶಾರೀರಿಕ ಏಳಿಗೆಗೆ ಸಹಕರಿಸುವುದು. |
| d) ಮೈಸೂರು ದೇಶದಲ್ಲಿ ತಯಾರಾಗುವ ಬೆಳ್ಳಿ, ಬಂಗಾರ ನವರತ್ನಗಳ ಒಡವೆಗಳು. | ಕರ್ನಾಟಕದಲ್ಲಿ ತಯಾರಾಗುವ ಬೆಳ್ಳಿ, ಬಂಗಾರ, ನವರತ್ನಗಳ ಒಡವೆಗಳು. |
| f) ಎಲ್ಲೆಲ್ಲಿ ಸಾಧ್ಯವಾದರೆ ಅಲ್ಲಲ್ಲಿ ಈ ಸಂಘದವರ ವ್ಯಾಪಾರ ತಯಾರಿಕೆಗಳನ್ನು ಎಕ್ಸಿಬಿಟ್ಟು ಮಾಡುವುದು ಅಥವಾ ಮತ್ತು ಎಕ್ಸಿಬಿಷನ್‌ಗಳನ್ನು ಏರ್ಪಡಿಸುವುದು. | ಎಲ್ಲೆಲ್ಲಿ ಸಾಧ್ಯವಾದರೆ ಅಲ್ಲಲ್ಲಿ ಈ ಸಂಘದವರ ವ್ಯಾಪಾರ ತಯಾರಿಕೆಗಳನ್ನು ಪ್ರದರ್ಶಿಸುವುದು ಮತ್ತು ಪ್ರದರ್ಶನಗಳನ್ನು ಏರ್ಪಡಿಸುವುದು. |
| j) ಗೌರ್ನಮೆಂಟು ಸ್ಥಾನಗಳಲ್ಲಿಯೂ, ವ್ಯಾಪಾರ ಸಂಘಗಳಲ್ಲಿಯೂ ಮೆಂಬರಾಗುವುದು ಮತ್ತು ಈ ಸಂಘದ ಉದ್ದೇಶಗಳನ್ನು ನೆರವೇರಿಸಲು ಗೌರ್ನಮೆಂಟಿನವರಲ್ಲಿಯೂ. | ಸರ್ಕಾರದ ಸ್ಥಾನಗಳಲ್ಲಿಯೂ ವ್ಯಾಪಾರ ಸಂಘಗಳಲ್ಲಿಯೂ ಮೆಂಬರಾಗುವುದು ಮತ್ತು ಈ ಸಂಘದ ಉದ್ದೇಶಗಳನ್ನು ನೆರವೇರಿಸಲು ಸರ್ಕಾರದವರಲ್ಲಿಯೂ |

| | |
|---|---|
| k) ಈ ಸಂಘದ ಉದ್ದೇಶಗಳನ್ನು ಸಫಲಗೊಳಿಸಲು ಈ ಸಂಘಕ್ಕೆ ಒಂದು ಕಟ್ಟಡವನ್ನು ಸಂಪಾದಿಸುವುದು ಒಂದು ನಿಧಿಯನ್ನು ಶೇಖರಿಸುವುದು ಮತ್ತು ಚರಸ್ಥಿರ ಆಸ್ತಿಗಳನ್ನು ಸಂಪಾದಿಸುವುದು. | ಈ ಸಂಘದ ಉದ್ದೇಶಗಳನ್ನು ಸಫಲಗೊಳಿಸಲು ಈ ಸಂಘಕ್ಕೆ ಕಟ್ಟಡಗಳನ್ನೂ ನಿಧಿಯನ್ನೂ ಮತ್ತು ಚರ ಸ್ಥಿರ ಆಸ್ತಿಗಳನ್ನೂ ಸಂಪಾದಿಸುವುದು. |
| | q) ಮೆಂಬರುಗಳ ಸೌಕರ್ಯಕ್ಕಾಗಿ ಅಸೋಸಿಯೇಷನ್ನಿನಿಂದ 1) ಒಂದು ಬ್ಯಾಂಕನ್ನೂ 2) ಚಿಟ್ ಫಂಡನ್ನೂ 3) ರಿಫೈನರಿ ಒಂದನ್ನೂ 4) ಗುಣಮಟ್ಟವನ್ನು ಕಂಡುಹಿಡಿಯುವ (Touch) ಶಾಖೆಯನ್ನೂ ಸ್ಥಾಪಿಸುವುದು. |
| | z) ಕರ್ನಾಟಕದ ಜ್ಯೂಯಲರ್ಸ್ ಅಸೋಷಿಯೇಷನ್ ಒಂದನ್ನು ಸ್ಥಾಪಿಸುವುದು. |

**ನಿಭಂಧನೆಗಳು**

| | |
|---|---|
| a) 'ಅಸೋಸಿಯೇಷನ್ ಅಥವಾ ಸಂಘ' ಎಂದರೆ ಜ್ಯೂಯಲರ್ಸ್ ಅಸೋಸಿಯೇಷನ್, ಬೆಂಗಳೂರು ಸಿಟಿ ಎಂದು ಅರ್ಥಮಾಡತಕ್ಕದ್ದು. | "ಜ್ಯೂಯಲರ್ಸ್ ಅಂಡ್ ಡೈಮಂಡ್ ಮರ್ಚೆಂಟ್ಸ್ ಅಸೋಸಿಯೇರ್ಷ" ಬೆಂಗಳೂರು ಸಿಟಿ ಎಂದು ಅರ್ಥ ಮಾಡತಕ್ಕದ್ದು. |



| | |
|---|---|
| b) 'ಜ್ಯೂಯಲರ್ಸ್ ಅಥವಾ ಸರಾಫರು' ಎಂದರೆ ಚಿನ್ನ, ಬೆಳ್ಳಿ, ನವರತ್ನಗಳನ್ನಾಗಲಿ ಅಥವಾ ಮತ್ತು ಚಿನ್ನ, ಬೆಳ್ಳಿ, ನವರತ್ನಗಳ ಒಡವೆಗಳನ್ನಾಗಲಿ ಕೊಂಡುಕೊಂಡು ಮಾರುವ ಶಕ್ತಿಯುಳ್ಳವರು ಎಂದು ಅರ್ಥ ಮಾಡತಕ್ಕದ್ದು. | 'ಜ್ಯೂಯಲರ್ಸ್ ಅಥವಾ ಸರಾಫರು' ಎಂದರೆ ಚಿನ್ನ, ಬೆಳ್ಳಿ, ನವರತ್ನಗಳನ್ನಾಗಲಿ ಅಥವಾ ಚಿನ್ನ ಬೆಳ್ಳಿ ನವರತ್ನಗಳ ಒಡವೆಗಳನ್ನಾಗಲಿ ಕೊಂಡುಕೊಂಡು ಮಾರುವ ಶಕ್ತಿಯುಳ್ಳವರು ಎಂದು ಅರ್ಥ ಮಾಡತಕ್ಕದ್ದು. |
| c) ಮೆಂಬರು ಅಥವಾ ಸದಸ್ಯರು, ಎಂದರೆ ಒಬ್ಬನೇ ಒಬ್ಬ ಸರಾಫು ವ್ಯಾಪಾರಿಯಾಗಲೀ, ಹಿಂದೂ ಸಂಸೃಷ್ಟ ಕುಟುಂಬದ ಸರಾಫು ವ್ಯಾಪಾರದ ಅಂಗಡಿಯಾಗಲೀ, ರಿಜಿಸ್ಟರ್ ಆಗಿರುವ ಅಥವಾ ಆಗದೆ ಇರುವ ಸರಾಫು ವ್ಯಾಪಾರದ ಸಂಘವಾಗಲೀ ಎಂದು ಅರ್ಥ ಮಾಡತಕ್ಕದ್ದು. | ಮೆಂಬರು ಅಥವಾ ಸದಸ್ಯರು, ಎಂದರೆ ಒಬ್ಬನೇ ಒಬ್ಬ ಸರಾಫು ವ್ಯಾಪಾರಿಯಾಗಲೀ, ಹಿಂದೂ ಸಂಸೃಷ್ಟ ಕುಟುಂಬದ ಸರಾಫು ವ್ಯಾಪಾರದ ಅಂಗಡಿಯಾಗಲೀ ರಿಜಿಸ್ಟರ್ ಆಗಿರುವ ಅಥವಾ ಆಗದೆ ಇರುವ ಸರಾಫು ವ್ಯಾಪಾರದ ಸಂಘವಾಗಲೀ ಮತ್ತು ಸಂಸ್ಥೆಗಳಾಗಲೀ ಎಂದು ಅರ್ಥ ಮಾಡತಕ್ಕದ್ದು. |
| 3 ಮೆಂಬರುತನ :—ಮೈಸೂರು ದೇಶದಲ್ಲಿ ಎಲ್ಲಿದ್ದಾಗ್ಯೂ | ಮೆಂಬರುತನ :— ಕರ್ನಾಟಕದಲ್ಲಿ ಎಲ್ಲಿದ್ದಾಗ್ಯೂ |
| 4 ಸಂಘದ ರಚನೆ :— | |
| [a] ಈ ಸಂಘಕ್ಕೆ ಒಂದು (1000) ಸಾವಿರ ರೂಪಾಯಿಗಳಿಗೆ ಕಮ್ಮಿ ಇಲ್ಲದೆ ಹಣ ಕೊಡುವ | ಎರಡು (2000) ಸಾವಿರ ರೂಪಾಯಿಗಳಿಗೆ ಕಮ್ಮಿ ಇಲ್ಲದೆ ಹಣ ಕೊಡುವ |
| [b] ಈ ಸಂಘಕ್ಕೆ ಐದುನೂರು (500) ರೂಪಾಯಿಗಳಿಗೆ ಕಮ್ಮಿ ಇಲ್ಲದೆ ಹಣ ಕೊಡುವ | ಒಂದು (1000) ಸಾವಿರ ರೂಪಾಯಿಗಳಿಗೆ ಕಮ್ಮಿ ಇಲ್ಲದೆ ಹಣ ಕೊಡುವ |

| | |
|---|---|
| [c] ಈ ಸಂಘಕ್ಕೆ ಒಂದು ನೂರು (100) ರೂಪಾಯಿಗಳಿಗೆ ಕಮ್ಮಿ ಇಲ್ಲದೆ ಹಣಕೊಡುವ | ಐದು ನೂರು (500) ರೂಪಾಯಿಗಳಿಗೆ ಕಮ್ಮಿ ಇಲ್ಲದೆ ಹಣ ಕೊಡುವ |
| [d] ಈ ಸಂಘಕ್ಕೆ ಮಾಹೆಯಾನ ಅರ್ಧ ರೂಪಾಯಿ (0-8-0) ಕಮ್ಮಿ ಇಲ್ಲದೆ ಹಣ ಕೊಡುವ | ನಾಲ್ಕು ರೂಪಾಯಿ (4) ಗಳಿಗೆ ಕಮ್ಮಿ ಇಲ್ಲದೆ ಹಣ ಕೊಡುವ |
| 14 ಓಟು ಮಾಡುವ ಅಧಿಕಾರವುಳ್ಳವರ ಪೈಕಿ ಶೇಕಡ (30) ಮಂದಿ ಯಾದರೂ ಹಾಜರಿದ್ದಲ್ಲಿ ಜನರಲ್ ಮೀಟಿಂಗಿಗೆ ಕೋರಂ ಇದೆಯೆಂದು ಭಾವಿಸತಕ್ಕದ್ದು. ಹೀಗೆ ಕೋರಂ ಇಲ್ಲದೆ ಇರುವ ಮತ್ತು ಮಂಡಲಿಯವರು ಮಾತ್ರ ಕರೆದಿರುವ ಮೀಟಿಂಗು ಮುಂದಿನ ವಾರ ಅದೇ ಸ್ಥಳ ಮತ್ತು ಕಾಲದಲ್ಲಿ ನಡೆಸತಕ್ಕದ್ದು. ಹಾಗೆ ಮುಂದುವರಿದ ಮೀಟಿಂಗಿಗೆ ಕೋರಂ ಅವಶ್ಯಕವಿಲ್ಲ. | ಓಟು ಮಾಡುವ ಅಧಿಕಾರವುಳ್ಳವರ ಪೈಕಿ ಶೇಕಡ (30) ಮಂದಿ ಯಾದರೂ ಹಾಜರಿದ್ದಲ್ಲಿ ಜನರಲ್ ಮೀಟಿಂಗಿಗೆ ಕೋರಂ ಇದೆಯೆಂದು ಭಾವಿಸತಕ್ಕದ್ದು. ಹೀಗೆ ಕೋರಂ ಇಲ್ಲದೆ ಇರುವ ಮತ್ತು ಮಂಡಲಿಯವರು ಮಾತ್ರ ಕರೆದಿರುವ ಮೀಟಿಂಗು ಒಂದು ಘಂಟೆಯ ನಂತರ ಅದೇ ಸ್ಥಳ ಮತ್ತು ಕಾಲದಲ್ಲಿ ನಡಿಸತಕ್ಕದ್ದು. ಹಾಗೆ ಮುಂದುವರಿದ ಮೀಟಿಂಗಿಗೆ ಕೋರಂ ಅವಶ್ಯಕವಿಲ್ಲ. |
| 17 ಕಾರ್ಯನಿರ್ವಾಹಕ ಮಂಡಲಿ:— ಈ ಸಂಘದ ಕಾರ್ಯಕಲಾಪಗಳನ್ನು ನೆರವೇರಿಸಲು ಐದುಜನ ಸದಸ್ಯರಿಗೆ ಕಮ್ಮಿ ಇಲ್ಲದಂತೆಯೂ 15 ಜನ ಸದಸ್ಯರಿಗೆ ಜಾಸ್ತಿ ಇಲ್ಲದಂತೆಯೂ ಇರುವ ಕಾರ್ಯನಿರ್ವಾಹಕ ಮಂಡಲಿ | ಕಾರ್ಯನಿರ್ವಾಹಕ ಮಂಡಲಿ :— ಈ ಸಂಘದ ಕಾರ್ಯಕಲಾಪಗಳನ್ನು ನೆರವೇರಿಸಲು ಐದು ಜನ ಸದಸ್ಯರಿಗೆ ಕಮ್ಮಿ ಇಲ್ಲದಂತೆಯೂ 15 ಜನ ಸದಸ್ಯರಿಗೆ ಜಾಸ್ತಿ ಇಲ್ಲದಂತೆಯೂ ಇರುವ |



| | |
|---|---|
| ಇರತಕ್ಕದ್ದು. ಆದರೆ ಈ ಮಂಡಲಿಯ ಸದಸ್ಯರುಗಳ ಪೈಕಿ ಕಡಿಮೆ ಇಲ್ಲದೆ ಅರ್ಧಪಾಲು ವೈಶ್ಯ ಮಂಡಲಿಯ ಸದಸ್ಯರುಗಳೂ ಉಳಿದ ಕಡಿಮೆ ಅರ್ಧ ಪಾಲು ಇತರ ಕೋಮಿನವರೂ ಇದ್ದೇ ಇರಬೇಕು. | ಕಾರ್ಯನಿರ್ವಾಹಕ ಮಂಡಲಿ ಇರತಕ್ಕದ್ದು. |
| 29 (c) ಸಂಘದ ಹಣಕಾಸುಗಳನ್ನು ತನ್ನ ಹೆಸರಿನಲ್ಲಿ ಇಡುವುದು. | ಸಂಘದ ಹಣಕಾಸುಗಳನ್ನು ಅಸೋಸಿಯೇಷನ್ನಿನ ಹೆಸರಿನಲ್ಲಿ ಷೆಡ್ಯೂಲ್ ಬ್ಯಾಂಕಿನಲ್ಲಿ ಇಡುವುದು. |
| 31 [b] ಸಂಘಕ್ಕೆ ಬರುವ ಎಲ್ಲಾ ಮೊಬಲಗುಗಳನ್ನು ಸಂಘದ ಪ್ರೆಸಿಡೆಂಟರ ಹೆಸರಿನಲ್ಲಿ ಡಿಪಾಜಿಟ್ಟು ಮಾಡುವುದು. | ಸಂಘಕ್ಕೆ ಬರುವ ಎಲ್ಲಾ ಮೊಬಲಗುಗಳನ್ನೂ ಸಂಘದ ಹೆಸರಿನಲ್ಲಿ ಷೆಡ್ಯೂಲ್ ಅಥವಾ ರಿಜರ್ವ್ ಬ್ಯಾಂಕಿನ ಅಡಳಿತಕ್ಕೆ ಒಳಪಟ್ಟ ಬ್ಯಾಂಕಿನಲ್ಲಿ ಇಡತಕ್ಕದ್ದು. ಇದನ್ನು ಸಂಘದ ಪ್ರೆಸಿಡೆಂಟರು ಮತ್ತು ಟ್ರೆಜರರ್‌ರವರು ಜಂಟಿಯಾಗಿಅಪರೇಟ್ ಮಾಡಬೇಕು. |
| [c] ಬ್ಯಾಂಕಿನ ಕರೆಂಟು ಮತ್ತು ಇತರ ಲೆಖ್ಖಗಳನ್ನು ಆಪರೇಟ್ ಮಾಡುವುದು, ಬಾಂಡುಗಳ ಮತ್ತು ಡಿಪಾಜಿಟ್ಟುಗಳ ಬಡ್ಡಿಯನ್ನು ತೆಗೆದುಕೊಳ್ಳುವುದು. | ಷೆಡ್ಯೂಲ್ ಬ್ಯಾಂಕುಗಳಲ್ಲಿ ಆಥವಾ ರಿಜರ್ವ್ ಬ್ಯಾಂಕ್ ಆಫ್ ಇಂಡಿಯರವರ ಅಡಳಿತಕ್ಕೆ ಒಳಪಟ್ಟ ಬ್ಯಾಂಕುಗಳಲ್ಲಿ ಕರೆಂಟು, ಸೇವಿಂಗ್ಸ್ ಮತ್ತು ಫಿಕ್ಸೆಡ್ ಡಿಪಾಜಿಟ್ಟುಗಳನ್ನು ಮಾಡುವುದು. ಇದನ್ನು ಸಂಘದ ಪ್ರೆಸಿಡೆಂಟರು ಮತ್ತು ಟ್ರೆಜರರ್‌ರವರು ಜಂಟಿಯಾಗಿ ಆಪರೇಟ್ ಮಾಡುವುದು. |

33 ಸಂಘದ ಹಣವೆಲ್ಲವೂ ಮಂಡಲಿಯವರು ತೀರ್ಮಾನಿಸುವ ಮೇರೆಗೆ ಸಂಘದ ಪರವಾಗಿ ಸಂಘದ ಪ್ರೆಸಿಡೆಂಟರ ಹೆಸರಿನಲ್ಲಿ ಡಿಪಾಜಿಟ್ಟು ಮಾಡಬೇಕು. ಹಾಗೆ ಡಿಪಾಜಿಟ್ಟು ಮಾಡಿದ ಮೊಬಲಗುಗಳ ಪೈಕಿ ಬ್ಯಾಂಕಿನ ಕರೆಂಟು ಮತ್ತು ಇತರೇ ಲೆಖ್ಖಗಳನ್ನು ಕೋಶಾಧಿಕಾರಿಯವರು ಆಪರೇಟ್ ಮಾಡಬಹುದು. ಫಿಕ್ಸೆಡ್ ಡಿಪಾಜಿಟ್ಟುಗಳ ಮತ್ತು ಬಾಂಡುಗಳ ಬಡ್ಡಿಯನ್ನು ಕೋಶಾಧಿಕಾರಿಯವರು ತೆಗೆದುಕೊಳ್ಳಬಹುದು. ಆದರೆ ಫಿಕ್ಸೆಡ್ ಡಿಪಾಜಿಟ್ಟುಗಳ ಮತ್ತು ಬಾಂಡುಗಳ ಅಸಲು ಮೊಬಲಗುಗಳನ್ನು ವಾಪಸ್ ತೆಗೆದುಕೊಳ್ಳುವಾಗ ಪ್ರೆಸಿಡೆಂಟರು ಮತ್ತು ಕೋಶಾಧಿಕಾರಿಯವರೂ ಏಕೀಭವಿಸಿಯಾಗಲೀ ಅಥವಾ ಮಂಡಲಿಯುರು ತೀರ್ಮಾನಿಸುವ ಮೇರೆಗೆ ಇಬ್ಬರು ಸದಸ್ಯರುಗಳಾಗಲಿ ವಾಪಸ್ ತೆಗೆದುಕೊಳ್ಳಬಹುದು.

ಸಂಘದ ಹಣವೆಲ್ಲವೂ ಮಂಡಲಿಯವರು ತೀರ್ಮಾನಿಸುವ ಮೇರೆಗೆ ಸಂಘದ ಪರವಾಗಿ ಸಂಘದ ಹೆಸರಿನಲ್ಲಿ ಷೆಡ್ಯೂಲ್ ಬ್ಯಾಂಕಿನಲ್ಲಿ ಡಿಪಾಜಿಟ್ ಮಾಡಬೇಕು. ಹಾಗೆ ಡಿಪಾಜಿಟ್ಟು ಮಾಡಿದ ಮೊಬಲಗುಗಳ ಪೈಕಿ ಬ್ಯಾಂಕಿನ ಕರೆಂಟು ಮತ್ತು ಇತರೇ ಲೆಖ್ಖಗಳನ್ನು ಅಧ್ಯಕ್ಷರು ಮತ್ತು ಕೋಶಾಧಿಕಾರಿಯವರೂ ಜಾಯಿಂಟ್ ಆಗಿ ಆಪರೇಟ್ ಮಾಡಬಹುದು. ಫಿಕ್ಸೆಡ್ ಡಿಪಾಜಿಟ್ಟುಗಳ ಮತ್ತು ಬಾಂಡುಗಳ ಬಡ್ಡಿಯನ್ನು ಅಧ್ಯಕ್ಷರು ಮತ್ತು ಕೋಶಾಧಿಕಾರಿಯವರು ತೆಗೆದುಕೊಳ್ಳಬಹುದು. ಆದರೆ ಫಿಕ್ಸೆಡ್ ಡಿಪಾಜಿಟ್ಟುಗಳ ಮತ್ತು ಬಾಂಡುಗಳ ಅಸಲು ಮೊಬಲಗುಗಳನ್ನು ವಾಪಸ್ ತೆಗೆದುಕೊಳ್ಳುವಾಗ ಪ್ರೆಸಿಡೆಂಟರು ಮತ್ತು ಕೋಶಾಧಿಕಾರಿಯವರೂ ಏಕೀಭವಿಸಿ ವಾಪಸು ತೆಗೆದುಕೊಳ್ಳಬಹುದು.

# Audited Accounts for the Years 1971 & 1972

# JEWELLERS ASSOCIATION BANGALORE



## Income and Expenditure Account for the period 31st December 1971

| EXPENDITURE | | | Rs. | Ps. |
|---|---|---|---|---|
| To Electrical Charges .... .... | | | 583 | 13 |
| Stationery .... .... | | | 97 | 26 |
| General charges .... .... | | | 924 | 20 |
| Printing expenses .... .... | | | 492 | 50 |
| Telephone charges .... .... | | | 96 | 20 |
| Postage .... .... | | | 37 | 82 |
| Rent .... .... | | | 3,600 | 00 |
| Reading room .... .... | | | 186 | 41 |
| Legal charges .... .... | | | 150 | 00 |
| Meeting expenses .... .... | | | 1,697 | 76 |
| Salaries .... .... | | | 4,072 | 10 |
| Bonus .... .... | | | 330 | 00 |
| Audit fee .... ... | | | 100 | 00 |
| *Depreciation* | | | | |
| Building 2½% | 494 | 24 | | |
| Furniture 10% | 115 | 70 | 609 | 94 |
| Printing charges (Gold return form) | | | 72 | 10 |
| Amounts written off | | | | |
| Photos account | 573 | 22 | | |
| Deposit account | 37 | 00 | | |
| Treasurer | 30 | 94 | 641 | 16 |
| Excess of Income over expenditure .... | | | 6,659 | 06 |
| | | | 20,349 | 64 |

| INCOME | Rs. | Ps. |
|---|---|---|
| By Association lodging | 4,827 | 75 |
| Iron safe lockers | 1,271 | 00 |
| Dharma khata | 3,991 | 16 |
| Sangha subscriptions | 3,793 | 00 |
| Gold series register | 1,428 | 70 |
| Gold return forms (Sales) | 76 | 65 |
| Building rents | 3,600 | 00 |
| Interest | 1,331 | 38 |
| Admission fee | 30 | 00 |
| | 20,349 | 64 |

# JEWELLERS ASSOCIATION BANGALORE

## BALANCE SHEET AS AT 31st December 1971



| LIABILITIES | | | Rs. | Ps. |
|---|---|---|---|---|
| Capital fund as per last balance sheet | 29,802 | 61 | | |
| Add excess of income | 6,659 | 06 | 36,461 | 67 |
| Building fund | | | 7,868 | 00 |
| Rent advance | | | 1,000 | 00 |
| Audit fee payable | | | 100 | 00 |
| Bengal and Gujarat Food relief fund | | | 102 | 00 |
| Subscriptions received in advance | | | 127 | 00 |
| Gold Control Ordinance Fund | | | | |
| Balance as per last balance sheet | 9,555 | 57 | | |
| Collection during the year | 134 | 00 | | |
| | 9,689 | 57 | | |
| Less payments during the year | 280 | 97 | 9,408 | 60 |
| | | | 55,067 | 27 |

| ASSETS | | | Rs. | Ps. |
|---|---|---|---|---|
| Building as per last balance sheet | 19,769 | 65 | | |
| Less $2\frac{1}{2}\%$ depreciation | 494 | 24 | 19,275 | 41 |
| Furniture | 1,157 | 04 | | |
| Less depreciation 10% | 115 | 70 | 1,041 | 34 |
| Staff Advance | | | 160 | 15 |
| Chains | | | 42 | 06 |
| Nanjamma Rent advance | | | 2,000 | 00 |
| Interest | | | 5 | 00 |
| F. D. with Vysya Co-operative Bank | | | 15,000 | 00 |
| F. D. with Vysya Bank | | | 10,000 | 00 |
| The Vysya Co-operative Bank | | | 2,245 | 29 |
| Ragunanda Prasad | | | 1,800 | 00 |
| National Savings Certificates | | | 3,000 | 00 |
| Subscription receivable | | | 242 | 00 |
| Cash in hand | | | 256 | 02 |
| | | | 55,067 | 27 |

In terms of my report of date.

Sd/- K. Yugandhara Sreshty, B.Com., F.C.A.,
Chartered Accountant, 2nd Floor,
Venkateswara Market, Avenue Road, Bangalore-2

# JEWELLERS ASSOCIATION BANGALORE



## Income and Expenditure Account for the year ended 31st December 1972

| EXPENDITURE | | Rs. Ps. |
|---|---|---|
| To Weights and Weights Servicing Charges | | 520 43 |
| Sadilwar | | 795 39 |
| Telephone Charges | | 41 25 |
| Reading Room Expenses | | 299 72 |
| Printing Charges | | 725 10 |
| Gold series Register Printing Charges | | 2,426 88 |
| Legal Charges | | 116 50 |
| Postage | | 31 75 |
| Lighting charges | | 658 49 |
| Rent paid | | 3,300 00 |
| Independence day expenses | | 39 95 |
| Stationery charges | | 118 56 |
| Salaries | | 4,690 26 |
| Audit Fees | | 150 00 |
| All India Sharoff Association Subscription | | 500 00 |
| Depreciation : Building at 2½% | 481 88 | |
| Furniture at 10% | 128 16 | 610 04 |
| Excess of Income over expenditure | | 14,089 41 |
| | | 29,343 71 |

| INCOME | Rs. Ps. |
|---|---|
| By Lodging Charges | 6,422 00 |
| Sangha Subscription | 7,856 00 |
| Admission Fees | 190 00 |
| Interest | 1,334 11 |
| Safe Lokers-Hire charges | 1,685 75 |
| Weighing Charges | 4,802 35 |
| Diamond Weighing charges | 1,182 45 |
| Rent received | 3,600 00 |
| Gold series Register Sales | 1,995 00 |
| Sale of news phpers | 87 75 |
| Sale of gold return forms | 188 30 |
| | 29,343 71 |

# JEWELLERS ASSOCIATION BANGALORE

## BALANCE SHEET AS AT 31st December 1972



| LIABILITIES | | Rs. Ps. |
|---|---|---|
| **Capital Fund :** | | |
| As per last Balance Sheet | 36,461 67 | |
| Add excess of Income | 14,389 41 | 50,851 08 |
| **Building Fund :** | | |
| As per last Balance Sheet | 7,868 00 | |
| Add addition during the year | 1,690 80 | 9,558 80 |
| Audit fee : As per last Balance Sheet | 100 00 | |
| Add outstanding this year | 150 00 | 250 00 |
| Bengal and Gujarat Food Relief Fund | | 102 00 |
| Rent Advance | | 1,000 00 |
| Subscriptions Received in Advance | | 46 00 |
| State Conference : | | |
| Collections | 1,126 00 | |
| Less Expenses | 590 45 | 535 55 |
| Gold Control Ordinance Fund | | |
| As per last Balance Sheet | 9,408 60 | |
| Add Collections during the year | 20 00 | |
| | 9,428 60 | |
| Less payments during the year | 99 90 | 9,328 70 |
| | | 71,672 13 |

| ASSETS | | Rs. Ps. |
|---|---|---|
| Building : As per last Balance Sheet | 19,275 41 | |
| Less Depreciation at $2\frac{1}{2}$% | 481 88 | 18,793 53 |
| Furniture : As per last Balance Sheet | 1,041 34 | |
| Additions during the year | 240 35 | |
| | 1,281 69 | |
| Less Depreciation at 10% | 128 16 | 1,153 53 |
| Staff advances | | 355 15 |
| Chains | | 42 06 |
| Nanjamma Rent advance | | 1,725 00 |
| Nanjamma | | 245 00 |
| R. V. Swamy, Advocate | | 200 00 |
| Imprest | | 5 00 |
| F. D. with Vysya Co-operative Bank | | |
| As per last Balance Sheet | 15,000 00 | |
| The additions during the year | 5,000 00 | 20,000 00 |
| F. D. with Vysya Bank | | 10,000 00 |
| Kapoor Chand (Advance) | | 6,000 00 |
| Ragunandana Prasad | | 2,400 00 |
| National Savings Certificate | | 3,000 00 |
| Subscriptions Receivable | | 2,025 00 |
| Vysya Co-operative Bank | | 5,501 62 |
| Cash in hand | | 226 24 |
| | | 71,672 13 |

In terms of my report of date.

Sd/- K. Yugandhara Sreshty, B Com., F.C.A., 5-3-73
Chartered Accountant, 2nd Floor,
Venkateswara Market, Avenue Road, Bangalore-2

ಮುದ್ರಕರು :
ವಿಚಾರ ದರ್ಪಣ ಪ್ರೆಸ್
ಅವಿನ್ಯೂರಸ್ತೆ ಬೆಂಗಳೂರು-2
1973